3) ಮೈಡಗಿರಿ ಸಹಕಾರ ಸಕ್ಕರೆ ಕಾರ್ಖಾನಿ, ಗಂಗಾಪೂರ ತಾ: ಮುಂಡರಗಿ

4) ಪಿಕಾರ್ಡ ಬ್ಯಾಂಕ್ ನಿ., ಮುಂಡರಗಿ

5) ಟಿ.ಎ.ಪಿ.ಸಿ.ಎಂ.ಎಸ್.ನಿ., ಮುಂಡರಗಿ

6) ಮುಂಡರಗಿ ತಾಲೂಕಾ ಕೋ-ಆಪ್ ಅಗ್ರಿಕಲ್ಚರಲ್ ಅಸೋಸಿಯೇಶನ್ ಸೊಸೈಟಿ ನಿ., ಮುಂಡರಗಿ

7) ಗದಗ ವಿಭಾಗ ಮಟ್ಟದ ಕಂಜುಮರ್ಸ ಕೋ-ಆಪ್. ಸೊಸೈಟಿ ನಿ., ಮುಂಡರಗಿ

8) ಮುಂಡರಗಿ ಮನೆ ಕಟ್ಟುವವರ ಸಹಕಾರ ಸಂಘ ನಿ, ಮುಂಡರಗಿ

9) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಬೀಡನಾಳ ತಾ: ಮುಂಡರಗಿ

ಈ) ಬ್ಯಾಂಕು ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದು, ಪ್ರಕರಣಗಳು ವಿಚಾರಣೆಯಲ್ಲಿರುತ್ತವೆ.

ನಗರೋತ್ಥಾನ ಯೋಜನೆ

1789 (939); ಶ್ರೀ ಬಣಕಾರ್ ಯು. ಬಿ.

ಅ) ಹಾವೇರಿ ಜಿಲ್ಲೆಯಲ್ಲಿ ನಗರೋತ್ಥಾನ ಯೋಜನೆಯ ಕಾಮಗಾರಿಗಳಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಕಳಪೆ ಆಗಿರುವ ಬಗ್ಗೆ ಆರೋಪಗಳು ಬಂದಿವೆ; ಅವುಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು;

ಆ) ಬಹಳಷ್ಟು ವಿಳಂಬಗತಿಯಲ್ಲಿ ಕಾಮಗಾರಿಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಆ ಗುತ್ತಿಗೆದಾರನ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಡಾ. ಖಮರುಲ್ ಇಸ್ಲಾಂ (ಪೌರಾಡಳಿತ, ನಗರ ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಹಾವೇರಿ ಜಿಲ್ಲೆಯಲ್ಲಿ ಬ್ಯಾಡಗಿ ಪುರಸಭೆ ವ್ಯಾಪ್ತಿಯಲ್ಲಿಯ ಕೆಲವು ಕಾಮಗಾರಿಗಳು ಕಳಪೆಯಾದ ಬಗ್ಗೆ ದೂರು ಬಂದಿದ್ದು, ಕಾಮಗಾರಿ ಸ್ಥಳಗಳಲ್ಲಿ ಸರಕಾರಿ ಇಂಜಿನಿಯರಿಂಗ್ ಕಾಲೇಜ್, ಹಾವೇರಿ ಇವರಿಂದ ಸ್ಥಳ ಪರಿಶೀಲನೆ ನಡೆಸಿ, ಪ್ರಾಥಮಿಕ ವರದಿ ಪಡೆಯಲಾಗಿರುತ್ತದೆ. ಸರಕಾರಿ ಇಂಜಿನಿಯರಿಂಗ್ ಕಾಲೇಜ್, ಹಾವೇರಿ ರವರು ಸೂಚಿಸಿರುವಂತೆ ಕಾಮಗಾರಿಗಳ ಸ್ಥಳದಲ್ಲಿ ಕೋರ್ ಕಟಿಂಗ್ ಮಾಡಿಸಿ ವರದಿಯನ್ನು ವಿಶ್ಲೇಷಿಸಿ ಸರಿಪಡಿಸುವ ಬಗ್ಗೆ ಮೆ॥ ಗಲಗಲಿ ಅಸೋಸಿಯೇಟ್ಸ್, ಹುಬ್ಬಳ್ಳಿ (ತಾಂತ್ರಿಕ ಸಲಹೆಗಾರರು) ರವರಿಗೆ ವಹಿಸಲಾಗಿರುತ್ತದೆ. ಮೆ॥ ಗಲಗಲಿ ಅಸೋಸಿಯೇಟ್ಸ್, ಹುಬ್ಬಳ್ಳಿ ರವರು ನೀಡಿರುವ ದುರಸ್ಥಿ ಮತ್ತು ನವೀಕರಣ ಪಡಿಸುವ ತಾಂತ್ರಿಕ ವರದಿಯಂತೆ ದುರಸ್ಥಿಪಡಿಸಲು ಯೋಜನಾ ಸಮಾಲೋಚಕರಿಗೆ (ಪಿ.ಎಂ.ಸಿ.) ಮತ್ತು ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ. ಸದರಿ ಕಾಮಗಾರಿಗಳನ್ನು ಸರಿಪಡಿಸುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ.

ಆ) ಬಂದಿದೆ.

ಇ) ವಿಳಂಬಗತಿಯಲ್ಲಿ ಕಾಮಗಾರಿಗಳು ನಡೆಯುತ್ತಿರುವ ಕುರಿತು ದಿನಾಂಕ: 30.05.2014, 10.06.2014, 16.08.2014 ಮತ್ತು 06.01.2015 ರಂದು ಜಿಲ್ಲಾ ಮಟ್ಟದ ಸಮಿತಿ ಸಭೆಗಳಲ್ಲಿ ಚರ್ಚಿಸಿ ಮಾರ್ಚ್ 2015ರ ಒಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ.

ವಿಳಂಬಗತಿಯಲ್ಲಿ ಕಾಮಗಾರಿಗಳು ನಡೆಯುತ್ತಿರುವ ಕುರಿತು ಗುತ್ತಿಗೆದಾರರಿಗೆ ಹಲವಾರು ಬಾರಿ ನೋಟಿಸ್‌ಗಳನ್ನು ನೀಡಿದ್ದು, ಅಂತಿಮವಾಗಿ ದಿನಾಂಕ: 24.12.2014 ರಂದು ನೋಟಿಸ್

ನೀಡಲಾಗಿದೆ. ನಿಗದಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದಲ್ಲಿ ಗುತ್ತಿಗೆ ಕರಾರಿನಂತೆ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಶಾದಿ ಮಹಲ್ ಮಂಜೂರು

1791 (941); ಶ್ರೀ ಬಣಕಾರ್ ಯು. ಬಿ. (ಹಿರೇಕೆರೂರು)

ಅ) ಹಿರೇಕೆರೂರು ತಾಲ್ಲೂಕು ಚಿಕ್ಕೋಗಿಲೆಯಲ್ಲಿ ಶಾದಿಮಹಲ್ ಮಂಜೂರು ಮಾಡುವ ಬಗ್ಗೆ ಮಾನ್ಯ ಸಚಿವರು 22.07.2014 ರಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದರೂ, ಇದುವರೆಗೆ ಮಂಜೂರು ಆಗದೇ ಇರುವುದಕ್ಕೆ ಕಾರಣ ಏನು;

ಆ) ಯಾವಾಗ ಮಂಜೂರು ಮಾಡಲಾಗುವುದು?

ಡಾ. ಖಮರುಲ್ ಇಸ್ಲಾಂ (ಪೌರಾಡಳಿತ, ನಗರ ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ದಿನಾಂಕ: 22.07.2014 ರಂದು ಶಾದಿಮಹಲ್ ನಿರ್ಮಾಣಕ್ಕಾಗಿ ಸ್ವೀಕೃತವಾದ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿ ಸಲ್ಲಿಸುವಂತೆ ನಿರ್ದೇಶನಾಲಯಕ್ಕೆ ಕಳುಹಿಸಲಾಗಿತ್ತು. ಸದರಿ ಪ್ರಸ್ತಾವನೆಯು ನಿಗಧಿತ ಮಾರ್ಗಸೂಚಿಗಳನ್ವಯ ಸಲ್ಲಿಸದೇ ಇದ್ದ ಕಾರಣದಿಂದಾಗಿ ದಿನಾಂಕ: 19.09.2014 ರ ನಿರ್ದೇಶನಾಲಯದ ಪತ್ರದನ್ವಯ ಸಂಸ್ಥೆಯ ಅಧ್ಯಕ್ಷರಿಗೆ ನಿಗಧಿತ ಮಾರ್ಗಸೂಚಿಗಳನ್ವಯ ದಾಖಲಾತಿಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವಂತೆ ಕೋರಲಾಗಿದೆ. ಆದರೆ ಇದುವರೆವಿಗೂ ನಿಗಧಿತ ಮಾರ್ಗಸೂಚಿಗಳನ್ವಯ ದಾಖಲಾತಿಗಳೊಂದಿಗೆ ಸಂಸ್ಥೆಯವರು ದಾಖಲಾತಿಗಳನ್ನು